**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕೋರ್ಟ್, ಬಸವನ ಬಾಗೇವಾಡಿ.**

ಸಿಸಿ ನಂಃ 612/2016

ಸಿ.ಡಬ್ಲ್ಯೂ: 8 ಪಿ.ಡಬ್ಲೂ: 3

| | | |
|---|---|---|
| ಸಾಕ್ಷಿದಾರರ ಹೆಸರು | ಡಾ. ವಿಜಯಮಹಾಂತೇಶ ಎಸ್. ಎನ್ | |
| ತಂದೆ/ಗಂಡನ ಹೆಸರು | ಶರಣಪ್ಪ | |
| ವಯಸ್ಸು | 48 | ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ದಡೆಣ್ಣವರ ಆಸ್ಪತ್ರೆ | |
| ವಾಸಸ್ಥಳ | ಬಾಗಲಕೋಟ. | |

**ಸಾಕ್ಷಿಯನ್ನು ಇಂದು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 17.03.2026**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

1. ನಾನು 2009 ರಿಂದ ಇಲ್ಲಿಯವರೆಗೆ ದಡೆಣ್ಣವರ ಆಸ್ಪತ್ರೆ ಬಾಗಲಕೋಟೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ:29.03.2016 ರಂದು ಸಂಜೆ 8.55 ಗಂಟೆಗೆ ಚಾಸಾ-1 ರವರು ಬಸಮ್ಮ ಎಂಬುವವರೊಂದಿಗೆ ಹಲ್ಲೆಯ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು, ನಾನು ಅವರನ್ನು ಪರಿಕ್ಷಿಸಿದಾಗ,

1. ಬಲ ಕಾಲಿನ ಮೇಲೆ ಊತದ ಗಾಯ,
2. ಬಲ ತೊಡೆಯ ಮೇಲೆ ಊತದ ಗಾಯ,
3. ಬಲ ಹೆಬ್ಬೆರಳಿನ ಮೇಲೆ ಹಲ್ಲಿನಿಂದ ಕಚ್ಚಿದ ಗಾಯ,
4. ತಲೆಯ ಹಿಂಭಾಗದಲ್ಲಿ 1X1 ಸೆಂಟೀ ಮೀಟರ್ ಹರಿದ ಗಾಯ, ನಾನು ಚಾಸಾ-1 ರವರಿಗೆ ಬಲಗೈ ಮತ್ತು ಬಲಕಾಲನ್ನು ಎಕ್ಸ್ ರೇ ಮಾಡಿಸಲು ಸಲಹೆ ನೀಡಿದ್ದು, ಸದರಿ ಚಾಸಾ-1 ರವರು ಎಕ್ಸ್ ರೇಗಳನ್ನು ಮಾಡಿಸಿ ನನ್ನ ಮುಂದೆ ಹಾಜರುಪಡಿಸಿದ್ದು, ಸದರಿ ಎಕ್ಸ್ ರೇಗಳನ್ನು ನಾನು ಪರೀಶಿಲಿಸಲಾಗಿ ಚಾಸಾ-

1ರವರಿಗೆ ಯಾವುದೇ ಹೊಸ ಮೂಳೆ ಮುರಿತದ ಗಾಯಗಳು ಕಂಡು ಬಂದಿರುವುದಿಲ್ಲ. ಚಾಸಾ-1ರವರ ಬಲಗಾಲಿನ ಮೇಲೆ ಹಳೆಯ ಮೂಳೆ ಮುರಿತದ ಗಾಯಗಳು ಇದ್ದವು.

3. ನಾನು ಮೇಲೆ ಹೇಳಿದ ಗಾಯಗಳು ಎಲ್ಲಾ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಹಾಗೂ ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

4. ನಿಪಿ-3ರಲ್ಲಿ ನಮೂದಿಸಿದ ಗಾಯಗಳು ಒಬ್ಬ ವ್ಯಕ್ತಿಗೆ ಹಲ್ಲಿನಿಂದ ಕಚ್ಚಿದರೆ ಆಗುವ ಸಾಧ್ಯತೆ ಇರುತ್ತದೆ.

**<u>ಪಾಟೀ ಸವಾಲುಃ- ಆರೋಪಿತರ ಪರ ಶ್ರೀ. ಎಮ್ ಎಮ್‌ವಾಯ್.ವಕೀಲರಿಂದ:-</u>**

1. ತಮ್ಮದು ಖಾಸಗಿ ಆಸ್ಪತ್ರೆ ಎಂದರೆ ಸರಿ. ಚಾಸಾ-1ರವರು ಯಾವಾಗಲೂ ನಮ್ಮ ಆಸ್ಪತ್ರೆಗೆ ಹುಷಾರಿಲ್ಲದಾಗ ಬಂದು ತೋರಿಸುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಈ ಕುರಿತು ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನನಗೆ ಮಾಹಿತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಎತ್ತಿನ ಗಾಡಿಯಲ್ಲಿ ಹೋಗುವಾಗ ಬಿದ್ದಾಗ ನಿಪಿ-3ರಲ್ಲಿ ನಮೂದಿಸಿರುವ ಗಾಯಗಳು ಆಗಬಹುದು ಎಂದರೆ ಸಾಕ್ಷಿಯು ನಿಪಿ-3ರ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ 1,2 ಮತ್ತು 4ರ ಗಾಯಗಳು ಆಗಬಹುದು ಎಂದು ಹೇಳುತ್ತಾರೆ. ನಾನು ಚಾಸಾ-1ರವರಿಗೆ ಸಹಾಯ ಮಾಡಲು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ** ವಿಡಿಯೋ ಕಾನ್ಫರೇನ್ಸ ಮುಖಾಂತರ ಮದ್ಯಾಹ್ನ 12.15 ರಿಂದ 12.25 ಗಂಟೆಯವರೆಗೆ **ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೆ ಕೆ ಸರಿ ಅದೆ,

1 ನೇ ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.